2809: (3756)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸಲು ಹಾಗೂ ಮತ ಕ್ಷೇತ್ರದ ಅಮೀನಗಡ ಗ್ರಾಮ ಶ್ರೀ ಬಸವೇಶ್ವರ ಟ್ರಸ್ಟ್ ಕಮಿಟಿಗೆ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

2) ಹಾಗಿದ್ದಲ್ಲಿ ಅದನ್ನು ಯಾವಾಗ ಮಂಜೂರ್ಮಾಡುವುದು?

ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸುವ ಬಗ್ಗೆ ಯಾವ ಪ್ರಸ್ತಾವನೆ ಇರುವುದಿಲ್ಲ. ಶ್ರೀ ಬಸವೇಶ್ವರ ದೇವಾಲಯದ ಟ್ರಸ್ಟ್ ಕಮಿಟಿ ದೇವಾಲಯದ ಕಲ್ಯಾಣ ಮಂಟಪ ಕಾಮಗಾರಿಗೆ ರೂ.98,678-00ಗಳ ಮಂಜೂರಾತಿಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ.

2) 1998-99ನೇ ಸಾಲಿನ ಅನುದಾನದಲ್ಲಿ ಪರಿಗಣಿಸಲಾಗುವುದು.

ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಉಂಟಾಗಿರುವ ನಷ್ಟ

2811: (3821)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಭಾರಿ ಮಳೆಯಿಂದ ಒಟ್ಟಾರೆ ಆಗಿರುವ ಜೀವ ಹಾನಿ ಎಷ್ಟು?

ಆ) ಬೆಳೆ ಹಾಗೂ ಆಸ್ತಿಗೆ ಸಂಬಂಧಿಸಿದಂತೆ ಆಗಿರುವ ಒಟ್ಟು ಹಾನಿಯೆಷ್ಟು?

ಇ) ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನವೆಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ರಾಜ್ಯದಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ 310 ಮಂದಿ ಮೃತಪಟ್ಟಿರುತ್ತಾರೆ.

ಆ) ಕೃಷಿ ಬೆಳೆಯೂ ಒಳಗೊಂಡಂತೆ ಖಾಸಗಿ ಆಸ್ತಿಗಳು ಮತ್ತು ಸಾರ್ವಜನಿಕ

ಆಸ್ತಿಗಳಿಗಾಗಿರುವ ಒಟ್ಟು ಹಾನಿಯ ಮೌಲ್ಯ ರೂ.797.00 ಕೋಟಿಗಳು.

ಇ) ಪ್ರವಾಹ ಪರಿಹಾರಕ್ಕಾಗಿ ಜಿಲ್ಲಾವಾರು ಅನುದಾನ ಬಿಡುಗಡೆಯ ವಿವರ ಹೀಗಿದೆ -

(ರೂ.ಲಕ್ಷಗಳಲ್ಲಿ)

ಜಿಲ್ಲೆಯ ಹೆಸರು	ಮೊಬಲಗು
ಬೆಂಗಳೂರು (ನ)	92.00
ಬೆಂಗಳೂರು (ಗ್ರಾ)	60.00
ಕೋಲಾರ	75.00
ತುಮಕೂರು	85.00
ಚಿತ್ರದುರ್ಗ	110.00
ದಾವಣಗೆರೆ	60.00
ಶಿವಮೊಗ್ಗ	123.00
ಮೈಸೂರು	50.00
ಚಾಮರಾಜನಗರ	78.00
ಮಂಡ್ಯ	215.00
ಚಿಕ್ಕಮಗಳೂರು	60.00
ಹಾಸನ	60.00
ಕೊಡಗು	150.00
ದಕ್ಷಿಣ ಕನ್ನಡ	254.50
ಉಡುಪಿ	155.50
ಗುಲ್ಬರ್ಗಾ	382.00

ಬೀದರ್	233.00
ರಾಯಚೂರು	319.00
ಕೊಪ್ಪಳ	171.00
ಬಳ್ಳಾರಿ	200.00
ಬೆಳಗಾಂ	100.00
ಬಿಜಾಪುರ	430.00
ಬಾಗಲಕೋಟೆ	110.00
ಧಾರವಾಡ	110.00
ಗದಗ	119.00
ಹಾವೇರಿ	60.00
ಉತ್ತರ ಕನ್ನಡ	136.00
ಸಣ್ಣ ನೀರಾವರಿ ಇಲಾಖೆ	400.00
ಲೋಕೋಪಯೋಗಿ ಇಲಾಖೆ	400.00
ಆರೋಗ್ಯ ಇಲಾಖೆ	400.00
ಒಟ್ಟು	4498.00

ಅಂತರ್ ರಾಜ್ಯ ಬಸ್ ಪರವಾನಗಿ

2812: (3823)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಂತರ ರಾಜ್ಯ ಬಸ್ ಪರವಾನಗಿಯನ್ನು